# ಜಿಲ್ಲಾಧಿಕಾರಿಗಳ ಕಾರ್ಯಾಲಯ ಉತ್ತರ ಕನ್ನಡ, ಕಾರವಾರ-581 301

**OFFICE OF THE DEPUTY COMMISSIONER, UTTARA KANNADA DISTRICT, KARWAR, -581 301**

ದೂರವಾಣಿ : 08382 226406, 226471 Email: dckarwar@gmail.com

Telephone: 08382 226603 (Fax) Website: http://uttara kannada.nic.in


ಸಂಖ್ಯೆ:ಕಂ.ಭೂಮಾ/ತಾಂ/ವಿವ-197/2016-17 ದಿನಾಂಕ: 24-04-2017

## ಮರು ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)

**(ದ್ವಿಲಕೋಟೆ ಸಿಸ್ಟಂ)**

ಉತ್ತರ ಕನ್ನಡ, ಜಿಲ್ಲೆಯ ತಹಶೀಲ್ದಾರ ಕಾರ್ಯಾಲಯಗಳ ಭೂಮಾಪನ ವಿಭಾಗದ ಆಕಾರ ಬಂದ ದಾಖಲೆಗಳನ್ನು ಡಾಟಾ ಎಂಟ್ರಿ ಮಾಡಲು ದಿನಾಂಕ: 16-01-2017 ರಂತೆ ಟೆಂಡರ ಕರೆಯಲಾಗಿತ್ತು. ಈ ಟೆಂಡರದಲ್ಲಿ ಒಬ್ಬರೆ ಟೆಂಡರ ಹಾಕಿದ್ದು, ಇವರು ಆಕಾರಬಂದ ಪ್ರತಿ ಸಾಲು ಡಾಟಾ ಎಂಟ್ರಿಗೆ ರೂ 4.20 ದರ ನಮೂದಿಸಿರುತ್ತಾರೆ. ಮಾನ್ಯ ಆಯುಕ್ತರು, ಸದರಿ ದರವನ್ನು ಒಪ್ಪದೇ ಇರುವುದರಿಂದ, ಮರು ಟೆಂಡರ ಕತೀರ್ಮಾನಿಸಲಾಗಿದೆ. ಕಾರಣ, The Karnataka Transparency in Public Procurements Act, 1999 and 2000 (as amended by Act 21 of 2001 and 4 of 2003) ಮತ್ತು 27ನೇ ನಿಯಮದಂತೆ ಡಾಟಾ ಎಂಟ್ರಿ ಆಪರೇಟರ್ ಹಾಗೂ ಕಂಪ್ಯೂಟರ್ ಪರಿಕರಗಳನ್ನು ಹೊಂದಿರುವ ನೋಂದಾಯಿತ ಪೂರ್ವಾರ್ಹತೆಯುಳ್ಳ ಟೆಂಡರುದಾರರಿಂದ (Pre qualified tenderers duly empanelled by e-governance) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆನ್ ಲೈನ್ ಮೂಲಕ ಮರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.

| ಅಲ್ಪಾವಧಿ ಇ-ಟೆಂಡರ್ ಘಟನಾವಳಿಗಳು | | |
|---|---|---|
| 2 | ಖಾಲಿ ಟೆಂಡರ್ ಫಾರಂ ಬೆಲೆ | ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಪ್ರಕಾರ ಮಾತ್ರ |
| 3 | ಆನ್ ಲೈನ್ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ | ದಿನಾಂಕ: 15-05-2017 ರ, ಸಾಯಂಕಾಲ 16.00 ರವರೆಗೆ |
| 4 | ಆನ್ ಲೈನ್ ಟೆಂಡರ್ ತೆರೆಯುವ ಸ್ಥಳ | ಜಿಲ್ಲಾಧಿಕಾರಿಗಳು ಉತ್ತರ ಕನ್ನಡ, ಕಛೇರಿ ಕಾರವಾರ |
| 5 | ಆನ್ ಲೈನ್ ಟೆಂಡರ್ ತೆರೆಯುವ ದಿನಾಂಕ/ಸಮಯ | ದಿನಾಂಕ: 17-04-2017 ಬೆಳಿಗ್ಗೆ 11.00 ಗಂಟೆಗೆ |
| 6 | ಇ.ಎಂ.ಡಿ.ಮೊತ್ತ | ಪ್ರತಿ ತಾಲೂಕಿಗೆ ರೂ. 25000/-<br>e– payment or NEFT ಮೂಲಕ ಪಾವತಿ ಮಾಡುವುದು |

**ಷರತ್ತುಗಳು:**

1) ಆಕಾರ ಬಂದ ಡಾಟಾ ಎಂಟ್ರಿ ಮಾಡುವ 01 ಸಾಲಿಗೆ (LINE) ಒಂದು ಘಟಕವಾಗಿ ಪರಿಗಣಿಸಲಾಗುವುದು. ಪ್ರತಿಯೊಂದು ಸಾಲಕ್ಕೆ ದರ ನಮೂದಿಸತಕ್ಕದ್ದು. ಇದರಲ್ಲಿ ಡಾಟಾ ಎಂಟ್ರಿ ಮಾಡಿ, ಪರಿಶೀಲನೆಗಾಗಿ ಒಂದು ಪ್ರಿಂಟ್ ನೀಡುವುದು ಹಾಗೂ ಪರಿಶೀಲನೆ ನಂತರ ಅಂತಿಮ ಮುದ್ರಣ ಮಾಡಿ, ಗ್ರಾಮವಾರು ಪುಸ್ತಕ ಬೈಂಡ್ ಮಾಡುವುದು ಒಳಗೊಂಡಿರತಕ್ಕದ್ದು.
2) ಆಸಕ್ತಿಯುಳ್ಳ ಸಂಸ್ಥೆ/ಏಜೆನ್ಸಿಯವರು ತಾಲೂಕುವಾರು (ಒಂದು ಅಥವಾ ಒಂದಕ್ಕಿಂತ ಹೆಚ್ಚು ತಾಲೂಕುಗಳಿಗೆ) ಟೆಂಡರ್ ಸಲ್ಲಿಸಬಹುದು

3) ಆಯುಕ್ತರು ಭೂಮಾಪನ ಇಲಾಖೆ ಬೆಂಗಳೂರು ರವರ ಪತ್ರ ಸಂಖ್ಯೆ/SSLR/13019/60/2016-PMU-SSLR DT:23-11-2016 ರಂತೆ ತಂತ್ರಾಂಶವನ್ನು ತಾಲೂಕಿನ ಭೂಮಿ ಸರ್ವರಿನಲ್ಲಿ ಅಳವಡಿಸಲಾಗಿದ್ದು, ಆಫ್ ಲೈನನಲ್ಲಿ ಡಾಟಾ ಎಂಟ್ರಿ ಕಾರ್ಯ ಪೂರ್ಣಗೊಂಡ ನಂತರ ಭೂಮಿ ತಾಲೂಕು ಸರ್ವರಿಗೆ Data Port ಗೆ ಅಪಲೋಡ ಮಾಡಿ, ದಾಖಲೆಗಳ ಅಂತಿಮ ಪ್ರಿಂಟ್ ತೆಗೆದು ಸಲ್ಲಿಸುವುದು. ಇದಕ್ಕೆ ಅವಶ್ಯವಾದ ಸಹಕಾರವನ್ನು ಜಿಲ್ಲಾ ಸಮಾಲೋಚಕರಿಂದ ಪಡೆಯುವುದು.

4) ಡಾಟಾ ಎಂಟ್ರಿ ಕಾರ್ಯವನ್ನು ಕಡ್ಡಾಯವಾಗಿ ಆಯಾ ತಾಲೂಕಿನ ತಹಶೀಲ್ದಾರರ ಕಾರ್ಯಾಲಯದಲ್ಲಿ ಭೂಮಾಪನ/ಕಂದಾಯ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸತಕ್ಕದ್ದು

5) ಪರಿಶೀಲನೆಗಾಗಿ ಮತ್ತು ಅಂತಿಮ ಮುದ್ರಣಕ್ಕಾಗಿ , ತಂತ್ರಾಂಶದಲ್ಲಿ ಒದಗಿಸಿರುವಂತೆ A3 ಪ್ರಮಾಣದ ಹಾಳೆಗಳ ಎರಡು ಬದಿಯಲ್ಲಿ ಮುದ್ರಿಸುವುದು.

6) ಡಾಟಾ ಎಂಟ್ರಿ ಕಾರ್ಯ ಪೂರ್ಣಗೊಂಡು ಅಂತಿಮ ಮುದ್ರಣ ನಂತರ ಗ್ರಾಮವಾರು **45x30** ಗಾತ್ರದ ಪುಸ್ತಕಗಳನ್ನು **32** ಅಂಶದ **straw Board** ದಿಂದ ಬೈಂಡ್ ಮಾಡಿಸಿ, ತಹಶೀಲ್ದಾರರಿಗೆ ಹಸ್ತಾಂತರಿಸುವುದು. ಮತ್ತು ಪೂರ್ಣಗೊಳಿಸಲಾದ ಡಾಟಾ ಎಂಟ್ರಿ ವಿವರಗಳ SOFT ಪ್ರತಿ (CD/DVD)ಗಳನ್ನು ಭೂದಾಖಲೆಗಳ ಸಹಾಯಕ ಸಲ್ಲಿಸತಕ್ಕದ್ದು

7) ಡಾಟಾ ಎಂಟ್ರಿ ಕಾರ್ಯಕ್ಕೆ ಗಣಕಯಂತ್ರ, ಪ್ರಿಂಟರ್ ಇತ್ಯಾದಿ ಸೌಲಭ್ಯಗಳನ್ನು ನಿಗದಿತ ಸಮಯದಲ್ಲಿ ಡಾಟಾ ಎಂಟ್ರಿ ಕಾರ್ಯವು ಪೂರ್ಣಗೊಳಿಸುವ ಪ್ರಮಾಣಕ್ಕೆ ಪೂರಕ ಸಂಖ್ಯೆಯಲ್ಲಿ ಅಳವಡಿಸತಕ್ಕದ್ದು. ಹಾಗೂ ಡಾಟಾ ಎಂಟ್ರಿ ಕಾರ್ಯಕ್ಕೆ ಅವಶ್ಯಕವಿರುವ ಪೀಠೋಪಕರಣಗಳನ್ನು ಸಂಸ್ಥೆಯವರೆ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

8) ಡಾಟಾ ಎಂಟ್ರಿ ಕಾರ್ಯವನ್ನು ನಿರ್ವಹಿಸಲು Internet/LAN ಅಗತ್ಯವಿದ್ದ ಪಕ್ಷದಲ್ಲಿ ಸಂಸ್ಥೆಯವರೇ ಸೌಲಭ್ಯವನ್ನು ಮಾಡಿಕೊಳ್ಳುವುದು.

9) ಡಾಟಾ ಎಂಟ್ರಿ ಮಾಡುವ ಪ್ರತಿಯೊಂದು ವಿವರವೂ ಗೌಪ್ಯ ಮತ್ತು ಮಹತ್ವದ್ದಾಗಿದ್ದು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಡುತ್ತದೆ. ಸಂಸ್ಥೆ/ಏಜೆನ್ಸಿಯು ಯಾವುದೇ ರೂಪದಲ್ಲಿ ಡಾಟಾ ಎಂಟ್ರಿ ವಿವರಗಳನ್ನು ಬಳಸಿಕೊಳ್ಳತಕ್ಕದ್ದಲ್ಲ ಅಥವಾ ಪ್ರಕಟ ಪಡಿಸುವಂತಿಲ್ಲ. ಒಂದು ವೇಳೆ ಸಂಸ್ಥೆ/ಏಜೆನ್ಸಿಯು ಈ ವಿವರಗಳನ್ನು ದುರುಪಯೋಗಪಡಿಸಿರುವುದು ಕಂಡು ಬಂದರೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ಸಂಸ್ಥೆ/ಏಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ಜರಗಿಸಲಾಗುವುದು.

10) ಡಾಟಾ ಎಂಟ್ರಿ ಮಾಡಿದ ನಮೂದಿನಲ್ಲಿ ತಪ್ಪಿದ್ದಲ್ಲಿ ಅಂತಹ ತಪ್ಪಿಗೆ ಹಣ ಸಂದಾಯ ಮಾಡದೆ ದಂಡ ವಿಧಿಸಲಾಗುವುದು.

11) ಯಶಶ್ವಿ ಏಜೆನ್ಸಿ/ಸಂಸ್ಥೆಯವರಿಗೆ ಕಾರ್ಯಾದೇಶ ನೀಡಿದ ತಕ್ಷಣ (2-3 ದಿನಗಳಲ್ಲಿ) ಡಾಟಾ ಎಂಟ್ರಿ ಕಾರ್ಯವನ್ನು ಆರಂಭಿಸತಕ್ಕದ್ದು. ಪ್ರತಿ ತಾಲೂಕಿನ ಡಾಟಾ ಎಂಟ್ರಿ ಕಾರ್ಯವನ್ನು 60 ದಿನಗಳಲ್ಲಿ ಪೂರ್ಣಗೊಳಿಸುವುದು. ಪೂರ್ಣಗೊಳಿಸದೆ ಇದ್ದಲ್ಲಿ ದಂಡ ವಿಧಿಸಿ ಪಾವತಿಸುವ ಬಿಲ್ಲಿನಲ್ಲಿ ಕಡಿತಗೊಳಿಸಲಾಗುವುದು.

12) ಡಾಟಾ ಎಂಟ್ರಿ ಆಪರೇಟರುಗಳು ಪಿಯುಸಿ ವಿದ್ಯಾರ್ಹತೆ ಹೊಂದಿದ್ದು, ಕಂಪ್ಯೂಟರನಲ್ಲಿ ಶೈಕ್ಷಣಿಕ ಅರ್ಹತೆಯೊಂದಿಗೆ ಕನ್ನಡ, ಇಂಗ್ಲೀಷ ಓದಲು ಮತ್ತು ಕನ್ನಡ ಯುನಿಕ್ ಕೋಡ್ ಟೈಪ್ ಮಾಡಲು ಅರ್ಹತೆಯನ್ನು ಹೊಂದಿರಬೇಕು.

13) ಆಕಾರಬಂದಿನಲ್ಲಿ ದಾಖಲಾಗಿರುವ ಮಾಹಿತಿಯನ್ನು ಯಥಾವತ್ತಾಗಿ ಗಣಕೀಕರಣಗೊಳಿಸುವುದು.

14) ತಾಲೂಕಾ ಕಛೇರಿಯಲ್ಲಿನ ಡಾಟಾ ಎಂಟ್ರಿ ಮಾಡಬೇಕಾದ ದಾಖಲೆಗಳನ್ನು ಕಛೇರಿ ವೇಳೆಯಲ್ಲಿ ಪರಿಶೀಲಿಸಬಹುದು.

15) ತಪ್ಪಾಗಿರುವ ಆಕಾರಬಂದ ಡಾಟಾ ಎಂಟ್ರಿಗಳನ್ನು ಸರಿಪಡಿಸಿ, ಸರಿಪಡಿಸಿದ ಮತ್ತೊಂದು ಪ್ರತಿಯನ್ನು ಮುದ್ರಿಸಿ ನೀಡುವುದು.

16) ನಿಗದಿತ ಸಮಯದಲ್ಲಿ ಡಾಟಾ ಎಂಟ್ರಿ ಕಾರ್ಯವನ್ನು ಪೂರ್ಣಗೊಳಿಸಲು ಅಗತ್ಯ ಸಂಖ್ಯೆಯ ಗಣಕಯಂತ್ರ ವ್ಯವಸ್ಥೆ, ಆಪರೇಟರ್ ಸೇವೆಯನ್ನು ಒದಗಿಸುವುದು

17) ತಾಲೂಕಾ ಕಛೇರಿಯಲ್ಲಿ ಡಾಟಾ ಎಂಟ್ರಿ ಸ್ಥಳಾವಕಾಶ ಲಭ್ಯವಿಲ್ಲದೇ ಇದ್ದಲ್ಲಿ ಟೆಂಡರದಾರರೇ ಭೂಮಾಪನ ಕಛೇರಿಗೆ ಆದಷ್ಟು ಹತ್ತಿರವಿರಬಹುದಾದ ಸೂಕ್ತ ಸ್ಥಳಾವಕಾಶವನ್ನು ಗುರ್ತಿಸಿಕೊಂಡು, ಅವರ ವೆಚ್ಚದಲ್ಲಿಯೇ ಗಣಕೀಕರಣ ಕೇಂದ್ರವನ್ನು ಸ್ಥಾಪಿಸಿಕೊಂಡು ಕಾರ್ಯನಿರ್ವಹಿಸುವುದು.

18) ಒಂದು ಜಿಲ್ಲೆಯಲ್ಲಿ ಒಬ್ಬ ಬಿಡದಾರರಿಗೆ ಗರಿಷ್ಟ 03 ತಾಲೂಕುಗಳಿಗಿಂತ, ಹೆಚ್ಚಿನ ತಾಲೂಕುಗಳನ್ನು ನೀಡಲಾಗುವುದಿಲ್ಲ.

19) ತಾಲೂಕುವಾರು ಆಕಾರಬಂದ ಡಾಟಾ ಎಂಟ್ರಿ ಕಾರ್ಯ ಪೂರ್ಣಗೊಂಡ ನಂತರ ಸಂಬಂಧಿಸಿದ ತಾಲೂಕಿನ ಪರ್ಯಾವೇಕ್ಷಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳು ಕೆಲಸ ಪೂರ್ಣಗೊಳಿಸಿರುವ ಬಗ್ಗೆ ಪರಿಶೀಲಿಸಿ,ದೃಡೀಕರಿಸಿ ಪ್ರಸ್ತಾವನೆ ಸಲ್ಲಿಸಿದ ನಂತರ ಸಂಸ್ಥೆಗೆ ಹಣ ಪಾವತಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.ಆಯ್ಕೆಯಾದ L1 ಸಂಸ್ಥೆಯು ಆಕಾರಬಂದ್ ಡಾಟಾ ಎಂಟ್ರಿ ಪೂರೈಸಿರುವ ಗ್ರಾಮಗಳಿಗೆ ಸೇವಾ ಶುಲ್ಕವನ್ನು ಈ ಕೆಳಗಿನಂತೆ ಹಂತದಲ್ಲಿ ಪಾವತಿಸಲಾಗುವುದು.

- ಅವರಿಗೆ ವಹಿಸಿದ ಕಾರ್ಯದ ಶೇ.25% ಪೂರ್ಣಗೊಳಿಸಿದ್ದಲ್ಲಿ ----- ಶೇ 20% ಹಣ ಪಾವತಿಸಲಾಗುವುದು
- ಅವರಿಗೆ ವಹಿಸಿದ ಕಾರ್ಯದ ಶೇ.50% ಪೂರ್ಣಗೊಳಿಸಿದ್ದಲ್ಲಿ ----- ಶೇ 20% ಹಣ ಪಾವತಿಸಲಾಗುವುದು
- ಅವರಿಗೆ ವಹಿಸಿದ ಕಾರ್ಯದ ಶೇ.75% ಪೂರ್ಣಗೊಳಿಸಿದ್ದಲ್ಲಿ ----- ಶೇ 20% ಹಣ ಪಾವತಿಸಲಾಗುವುದು
- ಅವರಿಗೆ ವಹಿಸಿದ ಕಾರ್ಯದ ಶೇ.100% ಪೂರ್ಣಗೊಳಿಸಿದ್ದಲ್ಲಿ ----- ಶೇ 40% ಹಣ ಪಾವತಿಸಲಾಗುವುದು.

20) ಪ್ರತಿಯೊಂದು ಗ್ರಾಮದ ಆಕಾರಬಂದನ್ನು ಗಣಕೀಕರಣ ಕಾರ್ಯಕ್ಕೆ ಇಲಾಖೆಯಿಂದ ಪಡೆದುಕೊಳ್ಳುವ ಪೂರ್ವಭಾವಿಯಾಗಿ ಆಯಾ ಗ್ರಾಮದ ಆಕಾರಬಂದನ್ನು ಡಿಜಿಟಲ್ ಕ್ಯಾಮರಾ ಮೂಲಕ ಸ್ಥಿರ ಚಿತ್ರಿಕರಣಗೊಳಿಸಿ,ತತ್ಸಂಬಂಧ ಸಾಫ್ಟ ಕಾಫಿಯನ್ನು ಸಿಡಿ ಮಾಧ್ಯಮದಲ್ಲಿ ಸಂರಕ್ಷಿಸಿದ ನಂತರವೇ ಗಣಕೀಕರಣ ಕಾರ್ಯವನ್ನು ಪ್ರಾರಂಭಿಸತಕ್ಕದ್ದು.

21) ಡಾಟಾ ಎಂಟ್ರಿ ಕಾರ್ಯದ ತಾಲೂಕುವಾರು ಹಾಗೂ ಅವಶ್ಯಕವಿರುವ ಗಣಕಯಂತ್ರಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

## ನಿಬಂಧನೆಗಳು:

1) ಟೆಂಡರನಲ್ಲಿ ಭಾಗವಹಿಸುವ ಸಂಸ್ಥೆಯು ಉದ್ದಿಮೆ ಪರವಾನಿಗೆ ನೊಂದಣಿಯಾದ ಸಂಸ್ಥೆಯಾಗಿರಬೇಕು.
2) ಪಾನ್ ಕಾರ್ಡ ನೋಂದಣಿ ಹೊಂದಿರತಕ್ಕದ್ದು.
3) ಟೆಂಡರನಲ್ಲಿ ಭಾಗವಹಿಸುವ ಸಂಸ್ಥೆಯು ಕಳೆದ 3 ವರ್ಷದ ಆದಾಯ ತೆರಿಗೆ ವಿವರ ಸಲ್ಲಿಸಿರುವ ದಾಖಲೆ ಸಲ್ಲಿಸತಕ್ಕದ್ದು.
4) ಟೆಂಡರದಾರರು ಸೇವಾ ತೆರಿಗೆ ನೋಂದಣಿ ಹೊಂದಿರತಕ್ಕದ್ದು. ಸೇವಾ ತೆರಿಗೆ ಪಾವತಿಸಿದ ದಾಖಲೆಗಳನ್ನು ಸಲ್ಲಿಸತಕ್ಕದ್ದು.
5) ಟೆಂಡರದಾರರು ಈ ಹಿಂದೆ ಇಂತಹ ಕೆಲಸ ನಿರ್ವಹಿಸಿದ ಅನುಭವ ಪ್ರಮಾಣ ಪತ್ರ ನೀಡತಕ್ಕದ್ದು.
6) ಟೆಂಡರದಾರರು ಕಪ್ಪು ಪಟ್ಟಿಗೆ ಸೇರಿರಬಾರದು. ಈ ಕುರಿತು ಪ್ರತಿಜ್ಞಾ ಪತ್ರ ನೀಡುವುದು.
7) ಟೆಂಡರದಾರರು ಹೊಂದಿರುವ ಮೂಲ ಸೌಕರ್ಯಗಳ ವಿವರ ನೀಡುವುದು.
8) ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಯನ್ನು ಪಡೆದ ಸಂಸ್ಥೆ/ಏಜೆನ್ಸಿಯವರನ್ನು ಮಾತ್ರ ಹಣಕಾಸು ಬಿಡ್‌ಗೆ ಪರಿಗಣಿಸಲಾಗುವುದು.
9) ಯಶಸ್ವಿಯಾದ ಟೆಂಡರದಾರರು ರೂ 25000 ಸಾವಿರ ಭದ್ರತಾ ಠೇವಣಿಯನ್ನಾಗಿ ಬ್ಯಾಂಕ್ ಗ್ಯಾರಂಟಿ ನೀಡುವುದು.
10) ಟೆಂಡರದಾರರು ತೃಪ್ತೀಕರವಾದ ಸೇವೆ ನೀಡದಿದ್ದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ದಂಡವನ್ನು ವಿಧಿಸಲಾಗುವುದು.
11) ಆನ್ ಲೈನ್ ನಲ್ಲಿ ಸ್ವೀಕೃತವಾಗುವ ಯಾವುದೇ ಟೆಂಡರ್ ಗಳನ್ನು ಒಪ್ಪುವ ಅಥವಾ ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ..